

# ಅಂದದೂರು ಬೆಂಗಳೂರು

## ಆನಂದದ ತವರೂರು...

■ ಬಿ.ಕೆ. ಸುಮತಿ

ಅರೇ! ಬೆಂಗಳೂರು ಕನ್ನಡದಲ್ಲಿ ಲೇಖನ ಬೇಕಂತೆ! ಹೇಗೆ ಬರೆಯೋದು, ಏನು ಬರೆಯೋದು? ಯೋಚಿಸಲು ಶುರು ಮಾಡಿದೆ. ಅಲ್ಲಾ... ಮೊದಲು ಬೆಂಗಳೂರಲ್ಲಿ ಕನ್ನಡ ಇದೆಯಾ? ಅಂತ. ಕನ್ನಡ ಎಲ್ಲ ಒಂದೇ. ಧಾರವಾಡವೋ, ಮಂಗಳೂರೋ, ಹಾಸನವೋ, ದಾವಣಗೆರೆಯೋ ಎಲ್ಲಾ ಕನ್ನಡವೂ ಒಂದೇ, ಆದರೆ ಶೈಲಿ ತಾನೆ ಬೇರೆ ಬೇರೆ...

ಶತಾವಧಾನಿ ಗಣೇಶ ಅವರ ಮಾತು ನೆನಪಾಯಿತು.

'ನೋಡಿ ಬೆಂಗಳೂರು ಶೈಲಿ ಅಂತ ಹೇಳಲಾಗದು. ಇಲ್ಲಿನ ಕನ್ನಡ ಅಂದ್ರೆ ಅದು ಶಿಷ್ಟ ವ್ಯಾಕರಣದ ಕನ್ನಡವೇ. ವಿವಿಧ ವೃತ್ತಿಗಳ ಜನ ವಿಧವಿಧ ಕನ್ನಡ ಮಾತಾಡ್ತಾರೆ ಅಲ್ವೇ. ಬೇರೆ ಕೆಲವು ಕನ್ನಡ ಶೈಲಿಗಳು ಉಪಭಾಷೆ ಅನ್ನುವಷ್ಟು ವಿಶಿಷ್ಟವಾಗಿದೆ. ಆದರೆ ಇಲ್ಲಿ ಅಂಥದೇನು ಇಲ್ಲ' ಅಂದ್ರು.

ಹೌದಲ್ಲ...

ಕೆಂಪೇಗೌಡರು ಯಲಹಂಕದಿಂದ ಬೆಂಗಳೂರಿನ ಕಡೆಗೆ ಬಂದರು. ಇಲ್ಲಿನ ಕಲ್ಲು ಮಣ್ಣು ಗುಡ್ಡ ಹಸಿರು ನೋಡಿ ಈ ಪ್ರದೇಶವನ್ನು ರಾಜಧಾನಿ ಮಾಡಬೇಕು ಅಂತ ಅವರಿಗೆ ಅನಿಸಿತು. ಐದುನೂರು ವರ್ಷಗಳ ಹಿಂದೆ ಪುಟ್ಟ ಮಣ್ಣಿನ ಕೋಟೆ ಕಟ್ಟಿ ನಾಲ್ಕು ದಿಕ್ಕಿಗೆ ನಾಲ್ಕು ಗೋಪುರ ಮಂಟಪ ಕಟ್ಟಿ ಊರು ಇದಕ್ಕಿಂತ ಹೆಚ್ಚು ಬೆಳೆಯಬಾರದು ಇದು ಗಡಿ ಎಂದು ಹೇಳಿದರು. ಈಗ ಗಡಿಗೆ ಇಮ್ಮಡಿ ಮುಮ್ಮಡಿ ಬೆಳೆದು ಗಡಿ ಮಾಯವಾಗಿ ಸುತ್ತಮುತ್ತ ಇದ್ದ ಹಳ್ಳಿಗಳು ಕೇರಿಗಳು ಅರಣ್ಯಗಳು ಈ ಬೆಂಗಳೂರು ಎಂಬ ಮಾಯಾಂಗನೆಯ ತೆಕ್ಕೆಗೆ ಬಿದ್ದುಬಿಟ್ಟಿವೆ. ಕೆಂಪೇಗೌಡರ ಕನಸು ಮೀರಿ ಬೆಳೆದಿದೆ ಬೆಂಗಳೂರು ನಗರ.

ಬೆಂಗಳೂರು ಅಂದ್ರೆ?

ನಮ್ಮ ಪ್ರಕಾಶಣ್ಣನ (ಪ್ರಕಾಶ್ ಬೆಳವಾಡಿ) ಒಂದು ವೈರಲ್ ವಿಡಿಯೊ ನೆನಪಾಯಿತು.

'ಅಲ್ಲಿಂದ ಇಲ್ಲಿಂದ ಬೆಂಗಳೂರಿಗೆ ಬಂದವರು, ವಿ ಮೇಡ್ ಬೆಂಗಳೂರು ಅಂತಾರೆ. ಅಲ್ಲಪ್ಪಾ... ನಾವೇನು ನಿಮ್ಮನ್ನು ಕರೆದಿದ್ವಾ? ಹಾಗಲ್ಲ ಸಾರ್ ಇಲ್ಲಿ **good growth opportunity** ಇದೆ ಅಂತ ಹೇಳ್ತಿರಲ್ಲ ಅದು ಇತ್ತು ತಾನೇ... ಇತ್ತು ಎಂದು ನೀವು ಬಂದಿರಿ. ನೀವು ಮಾಡಿದ್ದು ಅಲ್ಲಪ್ಪಾ...' ಎಂದು.

'ಅಂದದೂರು ಬೆಂಗಳೂರು ಆನಂದದ ತವರೂರು ಹೊಯ್' ಅಂತ ಎಲ್ಲಿಂದಲೋ ಹಾಡು ಕೇಳಿಸಿತು. ಹೌದು. ಬೆಂಗಳೂರು ಅಂದ್ರೆ ಸ್ವರ್ಗ ಅನ್ನುವ ಕಲ್ಪನೆ ಎಲ್ಲರಿಗೂ ಅಂತಾರೆ. ಕಲ್ಪನೆ ಅಲ್ಲಾರಿ, ಅದು ವಾಸ್ತವ. ಬೆಂಗಳೂರು ನಿಜಕ್ಕೂ ಸ್ವರ್ಗ. ಬೆಂಗಳೂರಿನ ಹವಾ, ಅದು **air conditioned.** ಬೆಂಗಳೂರು ಸದಾ ಸುಖ ಸಮೃದ್ಧಿಯಿಂದ ಕೂಡಿರಬೇಕು ಅಂತ ಕೆಂಪೇಗೌಡರು ಹೊಂಡಗಳನ್ನು ಕೆರೆಗಳನ್ನು ನಿರ್ಮಿಸಿದರು. ಅಗ್ರಹಾರದ ಕೆರೆಗಳು, ಕೆಂಪಾಂಬುಧಿ ಕೆರೆ, ಯಡಿಯೂರು ಕೆರೆ, ಕೋಡಿಹಳ್ಳಿ ಕೆರೆ, ಸಾಂಕಿ ಕೆರೆ, ಸಂಪಂಗಿಕೆರೆ ಹೊಸಘಟ್ಟ, ಅಬ್ಬಾ ಅಬ್ಬಾ! ಒಂದೇ... ಎರಡೇ...

ಈ ಬೆಂಗಳೂರಲ್ಲಿ ಬಂಡೆಗಲ್ಲು, ಬೆಣಚುಕಲ್ಲು ಅಪಾರವಾಗಿದ್ವು. ರಸ್ತೆಗಳಿಗೆ ಅಡಿಪಾಯ ಹಾಕುವುದರಿಂದ ಹಿಡಿದು ವಿಧಾನಸೌಧ ಕಟ್ಟಡದವರೆಗೆ ಈ ಬೆಣಚುಕಲ್ಲುಗಳನ್ನೇ ಉಪಯೋಗಿಸಿರುವುದು. ಬಂಡೆಗಳನ್ನು ಚೂರಾಗಿಸಿ ಅನೇಕ ಕಟ್ಟಡಗಳನ್ನು ಕಟ್ಟಿದ್ದಾರೆ.

ಬೆಂಗಳೂರಿನ ಮಣ್ಣು ಫಲವತ್ತಾದ ಮಣ್ಣು ಹಸನಾದ ಮಣ್ಣು, ಹದವಾದ ಮಳೆ, ಕಣ್ತುಂಬೋ ಹಸಿರು, ಕನ್ನಡಿಗರ ಪ್ರೀತಿಯ ಉಸಿರು, ಸಾಲದೇ ಬೆಂಗಳೂರು ಹಬ್ಬಲು... ಹರಡಲು...

ಹ್ಹಾ! ಬೆಂಗಳೂರನ್ನು ರಾಜಧಾನಿ ಮಾಡಬೇಕು ಅಂದುಕೊಂಡಾಗ ಕೆಂಪೇಗೌಡರು ಬೇರೆ ಬೇರೆ ಕಡೆಗಳಿಂದ ಎಲ್ಲಾ ವೃತ್ತಿಗಳವರನ್ನು ಕರೆದು ಚಿನಿವಾರಪೇಟೆ, ನಗರ್ತಪೇಟೆ, ಅರಳೇಪೇಟೆ, ಬಳೆಪೇಟೆ, ಅಕ್ಕಿಪೇಟೆ, ಕಬ್ಬನ್ ಪೇಟೆ, ಹೀಗೆ ಪೇಟೆಗಳನ್ನು ಕಟ್ಟಿದರು. ಹತ್ತಾರು ಪೇಟೆಗಳನ್ನು ಮಾಡಿ ಬೆಂಗಳೂರನ್ನು ವ್ಯಾಪಾರ ವಹಿವಾಟು ಕೇಂದ್ರವನ್ನಾಗಿ ಮಾಡಿದರು.

ತಮಿಳುನಾಡು, ಆಂಧ್ರಪ್ರದೇಶ ವಿಜಯನಗರ ಚಂದ್ರಗಿರಿ ಹೀಗೆ ಎಲ್ಲಾ ದೂರದ ಪ್ರದೇಶಗಳಿಂದ